ಆ) ಯಾವ ಯಾವ ಇಲಾಖೆಯನ್ನು ಕಂಪ್ಯೂಟರೀಕರಣಗೊಳಿಸಲಾಗಿದೆ?

ಇ) ಒಟ್ಟು ಎಷ್ಟು ಜನ ಕಂಪ್ಯೂಟರ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ? ಅವರ ವೇತನದ ವಿವರ ನೀಡುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) 24.

ಆ) ಪ್ರಸ್ತುತ ಯಾವ ಇಲಾಖೆಯನ್ನೂ ಕಂಪ್ಯೂಟರೀಕರಣಗೊಳಿಸಲಾಗಿಲ್ಲ.

ಇ) ಒಬ್ಬರು ಮಾತ್ರ. ಇವರಿಗೆ ಮಾಸಿಕ ರೂ. 2000.00ಗಳ ಕ್ರೋಢೀಕೃತ ವೇತನ ನೀಡಲಾಗುತ್ತಿದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ಕೊರತೆ

1434 (1581) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಮಸ್ಯೆಯನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳೇನು?

ಇ) ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸೌಕರ್ಯ ಒದಗಿಸಲಾಗಿದೆ?

ಈ) ಹೊಸದಾಗಿ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ಸಂಪರ್ಕ ಕೋರಿ ತಾಲ್ಲೂಕಿನಲ್ಲಿ ಎಷ್ಟುಅರ್ಜಿಗಳು ಬಾಕಿ ಇವೆ?

ಉ) ಈ ತಾಲ್ಲೂಕಿನಲ್ಲಿ ವರ್ಷಕ್ಕೆ ಎಷ್ಟು ಹೊಸಬಡಾವಣೆಗಳಿಗೆ ವಿದ್ಯುತ್ ಸೌಕರ್ಯ ನೀಡಲಾಗುತ್ತಿದೆ?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಉದ್ಭವಿಸಿರುವ ವಿದ್ಯುತ್ ಕೊರತೆಯನ್ನು ಸರಿದೂಗಿಸುವ ಸಲುವಾಗಿ ರಾಜ್ಯದಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ 6 ಗಂಟೆಗಳ ಅವಧಿಯ ನಿಯಮಿತ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸ ಲಾಗುತ್ತಿದೆ. ಅದರಂತೆ, ಗುಂಡ್ಲುಪೇಟೆ ತಾಲ್ಲೂಕಿನಲ್ಲೂ ಸಹಾ ಇದೇ ರೀತಿ ಲೋಡ್ ಷೆಡ್ಡಿಂಗ್‌ನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ.

ಆ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿದೆ.

1) ಗುಂಡ್ಲುಪೇಟೆಯಲ್ಲಿರುವ 66:11 ಕೆ.ವಿ. ವಿದ್ಯುತ್ ಸಬ್ ಸ್ಟೇಶನ್‌ನ ಸಾಮರ್ಥ್ಯವನ್ನು 14.3 ಎಂ.ವಿ.ಎ ನಿಂದ 25 ಎಂ.ವಿ.ಗೆ ಹೆಚ್ಚಳಗೊಳಿಸುವುದು.

2) ಈ ತಾಲ್ಲೂಕಿನ ತೆರಕಣಾಂಬಿಯಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನಲ್ಲಿ ಹೆಚ್ಚುವರಿಯಾಗಿ 5 ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್ ಫಾರ್ಮರ್ ಅನ್ನು ಅಳವಡಿಸುವುದು.

3) ಈ ತಾಲ್ಲೂಕಿನ ಬೇಗೂರು ಗ್ರಾಮದಲ್ಲಿರುವ 66: 11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನಲ್ಲಿ ಇನ್ನೊಂದು 6.3 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್ ಫಾರ್ಮರನ್ನು ಹೆಚ್ಚುವರಿಯಾಗಿ ಅಳವಡಿಸುವುದು.

4) ಈ ತಾಲ್ಲೂಕಿನ ಬೊಮ್ಮಲಪುರ ಗ್ರಾಮದಲ್ಲಿ ಒಂದು 66: 11 ಕೆ.ವಿ. 16.3 ಎಂ.ವಿ.ಎ ಸಾಮರ್ಥ್ಯದ ವಿದ್ಯುತ್ ಸಬ್‌ಸ್ಟೇಷನ್‌ನನ್ನು ಸುಮಾರು 250 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು. ಇದಕ್ಕಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಸಹ ಪಡೆಯಲಾಗಿದೆ.

5) ಕೆ.ವಿ. ಪ್ರ.ನಿ.ನಿ.ಯು ಚಾಮರಾಜನಗರದಲ್ಲಿ ಒಂದು 220 :66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ನಿರ್ಮಾಣ ಮಾಡಲಿದೆ. ಈ ವಿದ್ಯುತ್ ಸ್ವೀಕರಣ ಕೇಂದ್ರ ನಿರ್ಮಾಣಗೊಂಡ ನಂತರ ಗುಂಡ್ಲುಪೇಟೆಯಲ್ಲಿರುವ 66: 11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿಗೆ ಚಾಮರಾಜನಗರದಿಂದ ಸುಮಾರು 40 ಕಿ.ಮೀ ಉದ್ದದ 66 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಿ, ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿದೆ.

6) ಗುಂಡ್ಲುಪೇಟೆಯಲ್ಲಿರುವ 66: 11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನಲ್ಲಿ ಕೆಪಾಸಿಟರ್ ಬ್ಯಾಂಕನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಈ ಕಾರ್ಯ ಪೂರ್ಣಗೊಂಡ ನಂತರ ವೋಲ್ಟೇಜ್ ಮಟ್ಟದಲ್ಲಿ ಸುಧಾರಣೆ ಉಂಟಾಗುತ್ತದೆ.

ಇ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 31-3-2000ರವರೆಗೆ ಒಟ್ಟು 7,775 ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಈ) ಈ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಉಳಿದಿರುವ ನೀರಾವರಿ ಪಂಪುಸೆಟ್ಟು ಅರ್ಜಿಗಳ ಸಂಖ್ಯೆ .75

ಉ) ಕಳೆದ ಮೂರು ವರ್ಷಗಳಲ್ಲಿ ಈ ತಾಲ್ಲೂಕಿನಲ್ಲಿ ಹೊಸದಾಗಿ ವಿದ್ಯುದೀಕರಣಗೊಳಿಸಲಾದ ಹರಿಜನ ಬಸ್ತಿ : ಜನತಾ ಕಾಲೋನಿ : ಗಿರಿಜನ ಕಾಲೋನಿಗಳ ಸಂಖ್ಯೆಗಳ ವಿವರಗಳು ಕೆಳಕಂಡಂತಿದೆ.

ವರ್ಷ	ಗುರಿ (ಸಾಧನೆ)	ಹೊಸದಾಗಿ ವಿದ್ಯುದೀಕರಣಗೊಂಡ ಹರಿಜನ ಬಸ್ತಿ : ಜನತಾ ಕಾಲೋನಿ : ಗಿರಿಜನ ಕಾಲೋನಿಗಳ ಸಂಖ್ಯೆಗಳು
1997-98	9	9
1998-99	9	10
1999-2000	3	4

ತರೀಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವ ಕೆರೆಗಳು

1437 (1669) ಶ್ರೀ ನೀಲಕಂಠಪ್ಪ ಬಿ. ಆರ್ (ತರೀಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?